

## ಕಂಗನಾ ಎಂಬ ರಾಣಿ

ಎಲ್ಲ ಕ್ಷೇತ್ರಗಳಲ್ಲೂ ಹೆಣ್ಣುಮಕ್ಕಳಿಗಿಂತ ಹೆಚ್ಚು ಸಂಭಾವನೆ ಸಿಗುವುದು ಗಂಡು ಮಕ್ಕಳಿಗೆ. ಬಾಲಿವುಡ್ ಕೂಡಾ ಇದಕ್ಕೆ ಹೊರತಲ್ಲ. ಹೀರೋಗಳು ಸದಾ ಹೀರೋಯಿನ್‌ಗಳಿಗಿಂತ ದುಪ್ಪಟ್ಟು ಸಂಭಾವನೆ ಪಡೆಯುತ್ತಾರೆ. ಆದರೆ ಕಂಗನಾ ಇದಕ್ಕೊಂದು ಅಪವಾದ. 'ಮಣಿಕರ್ಣಿಕಾ: ದಿ ಕ್ವೀನ್ ಆಫ್ ಝಾನ್ಸಿ' ಚಿತ್ರಕ್ಕೆ ಕಂಗನಾ ತೆಗೆದುಕೊಂಡಿರುವ ಸಂಭಾವನೆ ಬರೋಬ್ಬರಿ 14 ಕೋಟಿ ರೂಪಾಯಿ! ಈ ದುಬಾರಿ ಸಂಭಾವನೆಯ ಸುದ್ದಿ ಕೇಳಿ ಕರೀನಾ, ಕತ್ರೀನಾ ಮುಂತಾದ ಬಾಲಿವುಡ್‌ನ ಮುಂಚೂಣಿಯ ನಾಯಕಿಯರೆಲ್ಲ ಮೂಗಿನ ಮೇಲೆ ಬೆರಳಿಟ್ಟಿದ್ದಾರಂತೆ. ಸಾಮಾನ್ಯವಾಗಿ ಕಂಗನಾ ಚಿತ್ರವೊಂದಕ್ಕೆ 7 ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಿದ್ದಾಳೆ. ಈಗ ಅದು ದುಪ್ಪಟ್ಟಾಗಿದೆ. ಈ ಚಿತ್ರದಲ್ಲಿ ತಾತ್ಯಾ ಟೋಪೆಯ ಪಾತ್ರ ಮಾಡುತ್ತಿರುವ ಅತುಲ್ ಕುಲಕರ್ಣಿ ಮುಂತಾದ ನಟರು ಕಂಗನಾಳ ಸಂಭಾವನೆಯ ಅರ್ಧದಷ್ಟೂ ಪಡೆಯುತ್ತಿಲ್ಲವಂತೆ.

'ಚಿತ್ರ ಯಾವುದು, ಅದರಲ್ಲಿನ ಪಾತ್ರ ಯಾವುದು ಎನ್ನುವುದರ ಮೇಲೆ ನನ್ನ ಸಂಭಾವನೆ ನಿರ್ಧಾರವಾಗುತ್ತದೆ. ನನ್ನ ಜೀವನದಲ್ಲಿ ಫೈಟ್ ಮಾಡದೆ ಯಾವುದೂ ನನಗೆ ಸಿಕ್ಕಿಲ್ಲ. ಎಲ್ಲವನ್ನೂ ಹೋರಾಟದ ಮೂಲಕವೇ ಪಡೆದುಕೊಂಡಿದ್ದೇನೆ. ಆದರೆ ನನ್ನ ಮಕ್ಕಳಿಗೆ ಇಂತಹ ಸ್ಥಿತಿ ಬೇಡವೆಂದು ನಿರ್ಧರಿಸಿದ್ದೇನೆ' ಎಂದಿದ್ದಾಳೆ ಇನ್ನೂ ಮದುವೆಯಾಗದ ಕಂಗನಾ.

ಕಳೆದ ವರ್ಷ ದೀಪಿಕಾ ಪಡುಕೋಣೆ ಕೂಡಾ ಹೀಗೊಂದು ದಾಖಲೆ ಮಾಡಿದ್ದೂ ಸುದ್ದಿಯಾಗಿತ್ತು. ಅದು ಪದ್ಮಾವತ್ ಸಿನಿಮಾ. ಅದರಲ್ಲಿ ಹೀರೋಯಿನ್ ಆಗಿದ್ದ ದೀಪಿಕಾ ಹೀರೋಗಳನ್ನು ಹಿಂದಿಕ್ಕಿ 12 ಕೋಟಿ ರೂಪಾಯಿ ಸಂಭಾವನೆ ಪಡೆದಿದ್ದಳು ಎನ್ನುವ ಸುದ್ದಿ ಹಬ್ಬಿತ್ತು. ಆದರೆ 'ಮಣಿಕರ್ಣಿಕಾ' ಚಿತ್ರದಲ್ಲಿ ಕಂಗನಾ ಎದುರಿಸಿದ ಸ್ಥಿತಿ ಪೂರ್ಣ ಭಿನ್ನ. ಚಿತ್ರದ ನಿರ್ದೇಶಕ ಕ್ರಿಸ್ ಚಿತ್ರವನ್ನು ಅರ್ಧದಲ್ಲಿ ಕೈಬಿಟ್ಟು, ಎನ್‌ಟಿಆರ್ ಜೀವನಕಥೆ ಆಧಾರಿತ ಸಿನಿಮಾ ಮಾಡಲು ಹೊರ ನಡೆದರೂ ಕುಗ್ಗದ ಕಂಗನಾ, ತಾನೇ ಧೈರ್ಯ ವಹಿಸಿ ಚಿತ್ರವನ್ನು ಪೂರ್ಣಗೊಳಿಸಿದ್ದಾಳೆ. ಅವಳೇ ಹೇಳಿದಂತೆ, ಬಾಲಿವುಡ್‌ನಲ್ಲಿ ಹೋರಾಟ ಮಾಡದೆ ಯಾವುದೂ ಅವಳಿಗೆ ಸುಲಭವಾಗಿ ದಕ್ಕಿಲ್ಲ.



## ಕಪಿಲ್ ಮದುವೆಗೆ ರೆಡಿ

ಕಾಮಿಡಿ ಷೋ ಮೂಲಕ ದೇಶದಾದ್ಯಂತ ಅಭಿಮಾನಿಗಳನ್ನು ಹೊಂದಿರುವ ಕಪಿಲ್ ಶರ್ಮಾ, ಕಳೆದ ಒಂದು ತಿಂಗಳಿಂದ ಬೆಂಗಳೂರಿನಲ್ಲಿ ಸದ್ದಿಲ್ಲದೆ ನೆಲೆಸಿ ಮೈ ಕೈ ಹಗುರ ಮಾಡಿಕೊಂಡಿದ್ದಾನೆ. ಬೆಂಗಳೂರಿನ ಹೊರವಲಯದ ನಿಲುವಂಗಿ ಸ್ವಾಮೀಜಿಯೊಬ್ಬರ ಆಶ್ರಮದಲ್ಲಿ ವಾಸವಾಗಿ ಹತ್ತು ಕೇಜಿ ತೂಕ ಇಳಿಸಿಕೊಂಡಿರುವ ಕಪಿಲ್, ಮುಂದಿನ ಟೀವಿ ಷೋಗೆ ಸಿದ್ಧವಾಗಲು ಈ ಕಸರತ್ತು ಎಂದು ಹೇಳಿಕೊಂಡಿದ್ದ. ಆದರೆ ತೂಕ ಇಳಿಸಿಕೊಂಡಿರುವುದು ಮದುವೆಯ ಸಿದ್ಧತೆಗಾಗಿ ಎನ್ನುವುದು ಈಗ ಗೊತ್ತಾಗಿದೆ.

ಕಪಿಲ್ ಶರ್ಮಾ ಮದುವೆ ಡಿಸೆಂಬರ್ 11ರಂದು ಪಂಜಾಬಿನಲ್ಲಿ ನಡೆಯಲಿದೆಯಂತೆ. ಮದುವೆಗೆ ಕರೆಯಬೇಕಾದ ಬಾಲಿವುಡ್ ವಿವಿಐಪಿಗಳ ಪಟ್ಟಿಯೂ ಸಿದ್ಧವಾಗಿದೆಯಂತೆ. ಪಂಜಾಬಿನಲ್ಲಿ ಕುಟುಂಬದ ಸದಸ್ಯರೆಲ್ಲ ಮದುವೆಯ ಸಿದ್ಧತೆಗಳಲ್ಲಿ ತೊಡಗಿಕೊಂಡಿದ್ದಾರೆ. ಈ ಮಧ್ಯೆ ಹೊಸ ಟಿವಿ ಕಾಮಿಡಿ ಷೋ ಮದುವೆಗಿಂತ ಮುಂಚೆಯೇ ಶುರುವಾಗಲಿದೆ ಎಂದೂ ಸುದ್ದಿ ಹಬ್ಬಿದೆ.

■ ಬಿಂದು